ಶ್ರೀ ರಾಮಕೃಷ್ಣ ಹೆಗ್ಗಡೆ.— ಅಲ್ಲದಿದ್ದರೆ ಕೋರ್ಟಿಗೆ ಹೋಗಬಹುದು, ಸ್ಟೇ ಆರ್ಡರ್ ತರಬಹುದು. ಕೆಲವು ಜನರು ಕೋರ್ಟಿಗೆ ಹೋಗಿದ್ದಾರೆ ಎಂದು ಗೊತ್ತಾಗಿದೆ. ಆ ಕಾರಣದಿಂದ ಇದನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಬಯಸುವುದಿಲ್ಲ. ಅವರು ಕೋರ್ಟಿಗೆ ಹೋಗಿರುವುದರಿಂದ ವಿಜಿಲೆನ್ಸ್ ಕಮಿಷನ್‌ನವರು ಮಾಡಿದ್ದು ಸರಿಯೋ ತಪ್ಪೋ ಎಂಬುದನ್ನು ಅವರು ನಿರ್ಧಾರ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ನಾನು ಕೇಳಿದ ಪ್ರಶ್ನೆ ಏನೆಂದರೆ ರಾಜ್ಯ ಸರ್ಕಾರದವರು ರಾಜ್ಯ ಜಾಗೃತ ಆಯೋಗದವರಿಗೇನಾದರೂ ಪತ್ರ ಬರೆದಿದ್ದೀರಾ?

ಅಧ್ಯಕ್ಷರು.—*Suo-moto* ಮಾಡಬಹುದು ಎಂದು ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ಆ ಪ್ರಶ್ನೆ ಬೇರೆ. ನಾನು ಸರ್ಕಾರಕ್ಕೆ ಕೇಳತಕ್ಕದ್ದು ಸರ್ಕಾರದಿಂದ ಜಾಗೃತ ಆಯೋಗಕ್ಕೆ ಪತ್ರ ಬರೆದಿದ್ದೀರಾ? ಅಥವಾ ಫೋನ್ ಮಾಡಿದ್ದೀರಾ? ಏನು ಮಾಡಿದ್ದಾರೆ ಎಂಬುದನ್ನು ಹೇಳಿದರೆ ಸಾಕು.

ಶ್ರೀ ರಾಮಕೃಷ್ಣ ಹೆಗ್ಗಡೆ.— ನಾವಂತೂ ಯಾರಿಗೂ ಫೋನ್ ಮಾಡಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ, subject to verification ನಮ್ಮ ಸರ್ಕಾರದಿಂದ ವಿಜಿಲೆನ್ಸ್ ಕಮಿಷನ್‌ಗೆ ಯಾವುದೇ ಸೂಚನೆ ಹೋಗಿಲ್ಲ.

ಮಡಿಕೇರಿ ಪೇಟೆಯಲ್ಲಿ ಎನ್.ಕೆ. ಸುರೇಶ ಎಂಬುವರಿಗೆ ಪೋಲೀಸರಿಂದ ಆದ ಚಿತ್ರಹಿಂಸೆ ಬಗ್ಗೆ

ಶ್ರೀ ಎಂ.ಎಂ. ನಾಣಯ್ಯ (ಮಡಿಕೇರಿ).— ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೩-೧-೮೩ರಂದು ಕೊಡಗು ಜಿಲ್ಲೆಯ ಮಡಿಕೇರಿ ಪೇಟೆಯಲ್ಲಿ ಕನಕದಾಸ ರಸ್ತೆಯ ನಿವಾಸಿ ಎನ್.ಕೆ. ಸುರೇಶ ಎಂಬುವರು ಕಾವೇರಿ ಚಿತ್ರಮಂದಿರದಲ್ಲಿ ಚಿತ್ರ ನೋಡುತ್ತಿದ್ದಾಗ ರಾತ್ರಿ ೧೧-೩೦ರಲ್ಲಿ ಪೋಲೀಸರು ಎಳೆದು ಕೊಂಡುಹೋಗಿ ಲಾಕಪ್‌ನಲ್ಲಿ ಹಾಕಿ ಬಟ್ಟೆ ಬಿಚ್ಚಿ ಹೊಡೆದು ಮೈಯೆಲ್ಲಾ ಗಾಯ ಮಾಡಿದ್ದಾರೆ. ಹೊಡೆಯಬೇಡಿ ಬಿಡಿ ಎಂದು ಹೇಳಿದರೂ ಸಬ್-ಇನ್‌ಸ್ಪೆಕ್ಟರ್ ಬಿಡಲಿಲ್ಲ. ಅವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ನೋವನ್ನುಂಟು ಮಾಡಿದ್ದಾರೆ. ಇದು ಹೇಗಾಯಿತೆಂದರೆ ಚಿತ್ರಮಂದಿರದಲ್ಲಿ ಅವರು ಕುಳಿತಿರುವಾಗ ಒಬ್ಬ ಅಪರಿಚಿತ ವ್ಯಕ್ತಿ ಬಂದು ಪಕ್ಕದಲ್ಲಿ ಕೂರುತ್ತಾರೆ. ನಂತರ ಪೋಲೀಸರು ಬಂದು ದರದರ ಎಂದು ಎಳೆದುಕೊಂಡುಹೋಗುತ್ತಾರೆ. ಜೀಪಿಗೆ ಎಳೆದುಕೊಂಡುಹೋಗಿ ಲಾಕಪ್‌ನಲ್ಲಿ ಹಾಕಿದನಂತರ ಬೆಳಿಗ್ಗೆ ೧೧ ಗಂಟೆಯವರೆಗೂ ಬಿಡುವುದಿಲ್ಲ. ಏತಕ್ಕೆ ಬಿಡುವುದಿಲ್ಲ ಎಂದು ಕೇಳಿದರೆ ಅದಕ್ಕೆ ಸರಿಯಾಗಿ ಸಮಜಾಯಿಷಿ ಕೊಡುವುದಿಲ್ಲ. ಅನೇಕ ಜನರು ಅವರನ್ನು ಬಿಡಿಸಲು ಪ್ರಯತ್ನ ಮಾಡಿದಾಗ ನೀವೆಲ್ಲಾ ಏತಕ್ಕೆ ಬರುತ್ತೀರಿ, ಇವರ ಮೇಲೆ ಬಹಳ ಆಪಾದನೆಗಳಿವೆ ಎಂದು ಹೇಳಿದ್ದಾರೆ. ಆದರೆ ನಿಜವಾಗಿಯೂ ಅವರ ಮೇಲೆ ಯಾವ ಅಪರಾಧವೂ ಇಲ್ಲ. ಅವರು ಯುವ ಕಾಂಗ್ರೆಸ್ಸಿನ ಪದಾಧಿಕಾರಿ, ಮಡಿಕೇರಿ ತಾಲ್ಲೂಕು ಯುವಕ ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿ, ಒಳ್ಳೆಯ ವಾಲಿಬಾಲ್ ಆಟಗಾರ, ಸೌಮ್ಯ ವ್ಯಕ್ತಿ, ಒಳ್ಳೆಯ ನಾಗರೀಕ ಪ್ರಜೆ, ಕೇವಲ ೨೮ ವಯಸ್ಸಾಗಿದೆ. ಅಂಥವರನ್ನು ಈ ರೀತಿ ಸದೆಬಡಿದು ಅಮಾನುಷವಾಗಿ ಪೋಲೀಸ್ ಠಾಣೆಯಲ್ಲಿ ಹಿಂಸೆ ಕೊಡುವುದರಲ್ಲಿ ಏನರ್ಥವಿದೆ? ಮೊನ್ನೆ ವಿರಾಜಪೇಟೆ ತಾಲ್ಲೂಕ್ ಬೋರ್ಡ್ ಅಧ್ಯಕ್ಷರ ಮೇಲೆ ಪೋಲೀಸರು ತೊಂದರೆ ಮಾಡಿದ್ದಾರೆ. ಇವತ್ತು ಯುವಕ ಕಾಂಗ್ರೆಸ್ಸಿನ ಕಾರ್ಯಕರ್ತನಿಗೆ ಹಿಂಸೆ ಮಾಡಿದ್ದಾರೆ. ಪೋಲೀಸರು ಯೂನಿಫಾರಂ ಹಾಕಿದನಂತರ ಈ ರೀತಿ ಮಾನವೀಯತೆಯನ್ನು ಏತಕ್ಕೆ ಕಳೆದುಕೊಳ್ಳುತ್ತಿದ್ದಾರೋ ಅರ್ಥವಾಗುತ್ತಿಲ್ಲ. ಅವರ ಮೇಲೆ ಆಪಾದನೆ ಇದ್ದರೆ ಕಾನೂನು ಕ್ರಮ ಕೈಗೊಳ್ಳಬಹುದಾಗಿತ್ತು. ಅವರಿಗೆ ಯಾವ ರೀತಿ ಹೊಡೆದಿದ್ದಾರೆ ಎಂಬ ಬಗ್ಗೆ ಎರಡು ಮೂರು ಚಿತ್ರ ತೆಗೆದಿದ್ದು ಅದನ್ನು ತಮಗೆ ಕಳುಹಿಸಿ ಕೊಡುತ್ತಿದ್ದೇನೆ. ಇದು ಮನುಷ್ಯರಿಗೆ ಹೊಡೆಯುವಂಥದ್ದೋ ಅಥವಾ ಯಾವುದಾದರೂ ಪ್ರಾಣಿಗಳಿಗೆ ಹೊಡೆಯುವಂಥದ್ದೋ ನೋಡಬೇಕಾಗಿದೆ. ಈ ವಿಷಯ ಪತ್ರಿಕೆಯಲ್ಲೂ ಬಂದಿದ್ದು ಫೋಟೋ ಕೂಡ ತೆಗೆದಿದ್ದಾರೆ.

ಈ ರೀತಿ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಬಹಳ ಕಿರುಕುಳವಾಗಿದೆ. ನಂತರ ಅಲ್ಲಿ ಅನೇಕ ಜನ ಆಲ್ಲಿಗೆ ಹೋಗಿ ಆತ ಸೌಮ್ಯ ವ್ಯಕ್ತಿ, ನಾವು ಜಾಮೀನು ನೀಡುತ್ತೇವೆ ಬಿಡಿ ಎಂದು ಹೇಳಿದರೂ

ಆತನನ್ನು ಬಿಡಲಿಲ್ಲ. ಅಲ್ಲಿನ ಸಬ್ ಇನ್ಸ್‌ಪೆಕ್ಟರ್ ಲಾರೆನ್ಸ್ ಎಂದು ಇರಬಹುದು, ಅವರಿಗೆ ಎಷ್ಟು ಕೇಳಿಕೊಂಡರೂ ಬಿಟ್ಟಿರುವುದಿಲ್ಲ. ಆತನಿಗೆ ಚೆನ್ನಾಗಿ ಹೊಡೆದು ಚೈನಿನಲ್ಲಿ ಹೊಡೆದು ಯಾವುದೋ ಸಣ್ಣಪುಟ್ಟ ಕೇಸನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಈ ರೀತಿಯ ಹಲ್ಲೆ ಒಬ್ಬ ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಆಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಸೂಕ್ತ ಗಮನಹರಿಸಿ ಅಲ್ಲಿ ಏನು ಸಬ್ ಇನ್ಸ್‌ಪೆಕ್ಟರ್ ಚಿತ್ರಹಿಂಸೆ ಮಾಡಿದ್ದಾರೆ ಅವರನ್ನು ಕೂಡಲೇ ಸಸ್ಪೆಂಡ್ ಮಾಡಿ ಆತನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈ ಬಗ್ಗೆ ನಾವೂ ನೋಟೀಸ್ ಕೊಟ್ಟಿದ್ದೇವೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ.....

ಶ್ರೀ ಎಸ್. ಬಂಗಾರಪ್ಪ.—ನಮ್ಮ ಹತ್ತಿರ ಕೆಲವು ವಿವರಗಳು ಇವೆ. ಅವನ್ನು ಕೂಡ ಬೇಕಾಗಿರುತ್ತದೆ.

ಅಧ್ಯಕ್ಷರು.—ಅವರು ಹೇಳಿಕೆ ಮಾಡಲಿ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಿಕೆ ಮಾಡಿದ ಮೇಲೆ ನಾವು ವಿವರಗಳನ್ನು ಕೊಡಲು ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗ್ಡೆ.—ನಾನು ಈ ಬಗ್ಗೆ ಎನೂ ಹೆಚ್ಚು ಹೇಳಬಯಸುವುದಿಲ್ಲ. ಈ ಬಗ್ಗೆ ಒಂದು ಅರ್ಜಿ ಕೂಡ ಬಂದಿದೆ. ಮಾನ್ಯ ಸದಸ್ಯರು ೩ ಫೋಟೋಗಳನ್ನು ಕಳುಹಿಸಿದ್ದಾರೆ. ಈ ಬಗ್ಗೆ ಕೂಡಲೇ ತನಿಖೆಮಾಡಿ ವರದಿ ಕಳುಹಿಸಬೇಕೆಂದು ಪೋಲೀಸ್ ಸೂಪರಿಂಟಿಂಡೆಂಟ್‌ರವರಿಗೆ ಹೇಳಿದ್ದೇವೆ. ಇದಕ್ಕಿಂತಲೂ ಹೆಚ್ಚು ನಾನು ಏನನ್ನೂ ಹೇಳುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ರಾಮಾಯಣ, ಮಹಾಭಾರತದ ಬಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದರು. ಆ ಬಗ್ಗೆ ಉತ್ತರ ಕೊಡಲಿ.

ಅಧ್ಯಕ್ಷರು.—ಈ ಬಗ್ಗೆ ತಾವು ನನ್ನ ಕೊಠಡಿಗೆ ಬಂದು ಮಾತನಾಡಿ.

ಡಾ. ವಿ. ಎಸ್. ಆಚಾರ್ಯ.—ಪಿಳಿನೇ ನಿಯಮದ ಕೆಳಗೆ ಎತ್ತಿದ ವಿಷಯದ ಬಗ್ಗೆ ಮಾನ್ಯ ಸಚಿವರು ಭರವಸೆ ಕೊಟ್ಟಿದ್ದರಿಂದ ನಾವು ಕೇಳುತ್ತಿದ್ದೇವೆ ಅಷ್ಟೇ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಬಗ್ಗೆ ನನ್ನ ಕೊಠಡಿಗೆ ಬಂದು ಮಾತನಾಡಲಿ. ಇನ್ನು ಮಾನ್ಯ ರಾಮಕೃಷ್ಣ ಅವರು ಬೇಡಿಕೆ ಮೇಲೆ ಚರ್ಚೆ ಪ್ರಾರಂಭ ಮಾಡಲಿ. ಈಗಾಗಲೇ ಈ ಬೇಡಿಕೆಗಳ ಮೇಲೆ ಕಾಂಗ್ರೆಸ್‌ನವರು ೬೬, ಜನತಾದವರು ೫೨, ಬಿ. ಜೆ. ಪಿ. ನವರು ೫೫, ಸಿ.ಪಿ.ಐ. ನವರು ೧೦೯, ಸಿ.ಪಿ.ಎಂ. ನವರು ೫೧, ನಾಮಕರಣ ಸದಸ್ಯರು ೧೯ ನಿಮಿಷಗಳಷ್ಟು ವೇಳೆ ತೆಗೆದು ಕೊಂಡು ಮಾತನಾಡಿದ್ದಾರೆ.

ಶ್ರೀ ಕೆ. ಶಿವಮೂರ್ತಿ.—ಕ್ರಾಂತಿರಂದವರಿಗೂ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ಕೊಡುತ್ತೇನೆ. ಕುಳಿತುಕೊಳ್ಳಿ. ತಮ್ಮ ಹೆಸರು ಪಟ್ಟಿಯಲ್ಲಿ ಮೇಲೆಯೇ ಇದೆ.

ವಿತ್ತೀಯ ಕಾರ್ಯಕಲಾಪಗಳು

ಶ್ರೀ ವೈ. ರಾಮಕೃಷ್ಣ.—ಸನ್ಮಾನ್ಯ ಅಧ್ಯಕ್ಷರೇ, ಕಳೆದ ೨ ದಿವಸಗಳಿಂದ ಈ ಸಭೆಯ ಮುಂದೆ ರಸ್ತೆ ಸಾರಿಗೆ, ತೋಟಗಾರಿಕೆ, ಪಶುಸಂಗೋಪನೆ ಹಾಗೂ ಹೈನುಗಾರಿಕೆ, ವಕ್ಫ್, ಕಾರ್ಮಿಕ ಹಾಗೂ ಉದ್ಯೋಗ ಇಲಾಖೆಗಳ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ಆದರೆ ಬಹಳ ಮಂದಿ ಪ್ರಾತನಾಡಿದವರು ಕಾರ್ಮಿಕ ಹಾಗೂ ಉದ್ಯೋಗ, ರಸ್ತೆ ಸಾರಿಗೆ ಬಗ್ಗೆ ಮಾತನಾಡಿದ್ದಾರೆ. ನಾನು ಪಶುಸಂಗೋಪನೆ ಮತ್ತು ಹೈನುಗಾರಿಕೆ ವಿಚಾರವಾಗಿ ಕೆಲವು ವಿಚಾರವಿನಿಮಯ ಪ್ರಾಮಾಡಿಕೊಳ್ಳುವುದಕ್ಕೆ ನಿಂತಿದ್ದೇನೆ. ಅಂದರೆ, ನಮ್ಮ ಕಾಲದಲ್ಲಿ ನಡೆದಂತಹ ವಿಷಯಗಳ ಬಗ್ಗೆ ವರದಿಯ ಬಗ್ಗೆ ಚರ್ಚೆ ಮಾಡಲು ನಾವು ಇಲ್ಲಿ ವಿಧೋಧಪಕ್ಷದಲ್ಲಿ ನಿಂತಿದ್ದೇವೆ.